# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಮೈಕ್ರೋ ಸಾಲ (ವೈಯಕ್ತಿಕ) ಅಡಿಯಲ್ಲಿ ಹೆಚ್ಚುವರಿಯಾಗಿ ಉಳಿದಿರುವ ಮೊತ್ತವನ್ನು ಅರಿವು ಸಾಲ ಯೋಜನೆಗೆ ಉಪಯೋಗಿಸಿಕೊಳ್ಳುವ ಕುರಿತು.

**ಓದಲಾಗಿದೆ:- 1.** ಸರ್ಕಾರದ ಆದೇಶ ಸಂ.MWD 61 MDC 2021, ದಿ:29.09.2021.

**2.** ಸರ್ಕಾರದ ಸೇರ್ಪಡೆ ಆದೇಶ ಸಂ. MWD 61 MDC 2021, ದಿ:02.12.2021.

**3.**ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಈವರ ಏಕ ಕಡತ ಸಂ.ಅಸನಿ/ಮೈಕ್ರೋ ಸಾಲ/2020-21, ದಿ:06.12.2021.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂ.1 ರಲ್ಲಿನ ಸರ್ಕಾರದ ಆದೇಶ ದಿ:29.09.2021 ರಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದಿಂದ ಅನುಷ್ಠಾನಗೊಂಡಿರುವ ಅರಿವು (ARIVU) ವಿದ್ಯಾಭ್ಯಾಸ ಸಾಲ ಯೋಜನೆಯನ್ನು ಪ್ರಸಕ್ತ ಸಾಲಿನಿಂದ ಅನ್ವಯವಾಗುವಂತೆ ಬೋಧನ ಶುಲ್ಕವನ್ನು ಹಲವು ಷರತ್ತಿಗೊಳಪಟ್ಟು ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂ.2 ರಲ್ಲಿನ ಸರ್ಕಾರದ ಸೇರ್ಪಡೆ ಆದೇಶ ದಿ:02.12.2021 ರಲ್ಲಿ ಎಂ.ಡಿ/ಎಂ.ಎಸ್/ಎಂ.ಡಿ.ಎಸ್/ಎಂ.ಡಿ.ಆಯುಷ್ ಹಾಗೂ ಬಿ.ಎಸ್.ಸಿ (ಕೃಷಿ)/ಬಿ-ಫಾರ್ಮ/ಡಿ-ಫಾರ್ಮಕೋರ್ಸುಗಳ ವಿದ್ಯಾರ್ಥಿಗಳಿಗೆ ಅವರುಗಳ ವಿದ್ಯಾಭ್ಯಾಸ ಪೂರ್ಣವಾಗುವವರೆಗೂ ಅರಿವು ಸಾಲವನ್ನು ನೀಡಲು ಸೇರ್ಪಡೆ ಮಾಡಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂ.3 ರಲ್ಲಿನ ಏಕಕಡತದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಇವರು ದಿ:02.12.2021 ರ ಸೇರ್ಪಡೆ ಆದೇಶದಲ್ಲಿ ಅರಿವು ಸಾಲವನ್ನು ನೀಡಲು ಎಂ.ಡಿ/ಎಂ.ಎಸ್/ಎಂ.ಡಿ.ಎಸ್/ಎಂ.ಡಿ.ಆಯುಷ್ ಹಾಗೂ ಬಿ.ಎಸ್.ಸಿ (ಕೃಷಿ)/ಬಿ-ಫಾರ್ಮ/ಡಿ-ಫಾರ್ಮಕೋರ್ಸುಗಳ ವಿದ್ಯಾರ್ಥಿಗಳನ್ನು ಸಹ ಸೇರ್ಪಡೆ ಮಾಡಲಾಗಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಇದಕ್ಕೆ ಆಯವ್ಯಯ ಹಂಚಿಕೆ ಆಗಿಲ್ಲವಾದ್ದರಿಂದ ಮೈಕ್ರೋ ಸಾಲ (ವೈಯಕ್ತಿಕ) ಯೋಜನೆಯಡಿಯಲ್ಲಿ ಹೆಚ್ಚುವರಿಯಾಗಿ ಉಳಿತಾಯವಾಗುವ ರೂ.4,65,90,000/-ಗಳನ್ನು ಅರಿವು ಸಾಲ ಯೋಜನೆಗೆ ಬಳಕೆ ಮಾಡಿಕೊಳ್ಳಲು ಸರ್ಕಾರದ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಎಂಡಬ್ಲ್ಯೂ ಡಿ 61 ಎಂಡಿಸಿ 2021, ಬೆಂಗಳೂರು ದಿ: 09.12.2021.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಮೈಕ್ರೋ ಸಾಲ (ವೈಯಕ್ತಿಕ) ಯೋಜನೆಯಡಿಯಲ್ಲಿ ಹೆಚ್ಚುವರಿಯಾಗಿ ಉಳಿತಾಯವಾಗುವ ರೂ.4,65,90,000/- (ನಾಲ್ಕು ಕೋಟಿ ಅರವತ್ತೈದು ಲಕ್ಷದ ತೊಂಭತ್ತು ಸಾವಿರ ರೂಪಾಯಿಗಳು) ಗಳನ್ನು ಅರಿವು ಸಾಲ ಯೋಜನೆಗೆ ಬಳಕೆ ಮಾಡಿಕೊಳ್ಳಲು ಸರ್ಕಾರದ ಅನುಮೋದನೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಮಹಿಬೂಬ ಸಾಬ)**
ಸರ್ಕಾರದ ಉಪ ಕಾರ್ಯದರ್ಶಿ,
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ.

ಗೆ,

1. ಪ್ರಧಾನ ಮಹಾಲೇಖಪಾಲರು (ಎ & ಇ) (ಜಿ & ಎಸ್.ಎಸ್.ಎ) / (ಎ & ಆರ್.ಎಸ್.ಎ) ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ವಿ.ವಿ.ಗೋಪುರ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಸಮನ್ವಯಾಧಿಕಾರಿ, ಸಹಾಯವಾಣಿ ಕೇಂದ್ರ, ವಸಂತ ನಗರ, ಬೆಂಗಳೂರು.
5. ಶಾಖಾರಕ್ಷಾ ಕಡತ / ಹೆಚ್ಚುವರಿ ಪ್ರತಿ.